Regd No BG 165 7-10-1969

SATYAVADI Daily MYSORE 4 ★ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಸಂ. ರಂಗದವರಿಂದ ಹಾವಳಿ – ಬಂಗಾಲದಲ್ಲಿ

ರಾಜಕೀಯ ಕಾರ್ಯಕರ್ತರ ದುಷ್ಕೃತ್ಯ

ಕಲ್ಕತ್ತಾ— ದಕ್ಷಿಣ 24 ಪರಗಣಗಳಲ್ಲಿ ಸಂಯುಕ್ತ ರಂಗದ ವಿವಿಧ ಪಕ್ಷಗಳಲ್ಲಿನ ಹೊಡೆದಾಟದಲ್ಲಿ ರಾಜಕೀಯ ಕಾರ್ಯಕರ್ತರಿಂದ ಲೂಟಿ, ಭೀತಿಗೊಳಿಸಿ ಹಣ ಕಿತ್ತುಕೊಳ್ಳುವುದು, ಅಪಹರಣ ದಿನಚರಿ ಕಾರ್ಯಗಳಾಗಿದ್ದು, ಶಿಸ್ತು ಶಾಂತಿಭಂಗವಾಗಿರುವದಾಗಿ ವರದಿಯಾಗಿದೆ.

★

19 ವರ್ಷ ದೇಶಭ್ರಷ್ಟರು

ಜಲಪೈಗುರಿ— 1950 ರಲ್ಲಿ ಭೂತಾನ್ ರಾಜರಿಂದ ದೇಶದಿಂದ ಹೊರದೂಡಲ್ಪಟ್ಟ ಅಲ್ಲಿಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಗುರುಗರು ಇಲ್ಲಿವರೆಗೆ ಸಿಲುಗುರಿಯಲ್ಲಿ ವಾಸಿಸುತ್ತಿದ್ದರು. ರಾಜರು ಈಗ ಕ್ಷಮಾಪಣೆ ಮಾಡಿರುವದರಿಂದ 19 ವರ್ಷಗಳ ನಂತರ ಈಗ ಭೂತಾನಿಗೆ ವಾಪಸ್ಸಾಗುವರು.

★

ಚೌಡಯ್ಯನವರ ಸ್ಮಾರಕ

ಬೆಂಗಳೂರು – ಪ್ರಖ್ಯಾತ ಪಿಟೀಲು ಗಾರರಾದ ದಿ || ಚೌಡಯ್ಯನವರಿಗೆ ಸೂಕ್ತ ಸ್ಮಾರಕ ನಿರ್ಮಿಸಲು ಎಂ ಪಿ ಸಿ ಸಿ ಅಧ್ಯಕ್ಷ ಡಾ|| ನಾಗಪ್ಪ ಆಳ್ವಾರರು ಮತ್ತು ಮಂತ್ರಿ ಶ್ರೀ ಪುಟ್ಟಸ್ವಾಮಿಯವರು ಕರೆ ಇತ್ತರು.

○

ರಿಯಾಯಿತಿ

ಸಿರಸಿ— ಅಡಿಕೆಯ ಕೊಳ್ಳುವ ತೆರಿಗೆಯನ್ನು ಕೇಕಡಾ 5 ರಿಂದ 3 ಕ್ಕೆ ಇಳಿಸುವುದಾಗಿ ಆರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ವಾಗ್ದಾನ ಮಾಡಿರುವರು

★

ಉಪವಾಸ ಮುಕ್ತಾಯ

ನವದೆಹಲಿ— ಖಾನ್ ಅಬ್ದುಲ್ ಗಫಾರ್ ಖಾನರು ತಮ್ಮ ಮೂರು ದಿನಗಳ ಉಪವಾಸವನ್ನು ನಿನ್ನೆ ಬೆಳಿಗ್ಗೆ ಸಮಾಪ್ತಗೊಳಿಸಿದರು.

●

ಪಾದಯಾತ್ರೆ

ರಾಯಪುರ— ಮಹಾತ್ಮಾ ಗಾಂಧಿಯವರಿಗೆ ಗೌರವ ಸಲ್ಲಿಸಲು ಮಧ್ಯಪ್ರದೇಶದ ಮುಖ್ಯ ಮಂತ್ರಿ ಶ್ಯಾಂ ಚರಣ ಶುಕ್ಲರು ಜಾಬ್ರಾ ಬುಡಕಟ್ಟು ಭಾಗದಲ್ಲಿ ತಮ್ಮ ಚುನಾವಣಾ ಕ್ಷೇತ್ರದಲ್ಲಿ ಪಾದಯಾತ್ರೆ ಪ್ರಾರಂಭಿಸಿದರು – ಇತರ ಮಂತ್ರಿಗಳೂ ತಮ್ಮ ತಮ್ಮ ಕ್ಷೇತ್ರದಲ್ಲಿ ಪಾದಯಾತ್ರೆಯಲ್ಲಿರುವಂದು ತಮ್ಮ ಜೊತೆಯಲ್ಲಿರುವ ಪತ್ರಿಕೋದ್ಯೋಗಿಗಳಿಗೆ ತಿಳಿಸಿದರು.

●

ಇಂದಿರಾರವರ ಹಿಂದಿನ ದಾದಿ

ಕೊಯಮತ್ತೂರು— ಪ್ರಧಾನಿ ಇಂದಿರಾರವರ ಹಿಂದಿನ ದಾದಿಯಾಗಿದ್ದ 87 ವರ್ಷದ ಡೆನ್ಮಾರ್ಕಿನಲ್ಲಿ ಹುಟ್ಟಿದ ಮಿಸ್ ಅನ ಓರ್ಚಷಾಲ್ಟ್ ಇಂದಿರಾರನ್ನು ತಬ್ಬಿಕೊಂಕೆನ್ನೆಗಳಿಗೆ ತುಂಬಾ ಮತ್ತಿಟ್ಟರು – ಆಕೆಗೆ ಇಂದಿರಾರವರು ಗಂಧದ ಮರದ ಹಾರವನ್ನು ಬಹುಮಾನಿಸಿದರು.

○

ಕುಟುಂಬ ಯೋಜನ

ಮೈಸೂರು— ಮೈಸೂರು ಜಿಲ್ಲೆಯಲ್ಲಿ ಕುಟುಂಬ ಯೋಜನಾ ಪಕ್ಷದಲ್ಲಿ 6 ಶಿಬಿರಗಳಲ್ಲಿ 91 ಆಪರೇಷನ್ ಚಿಕಿತ್ಸೆಗಳು ನಡೆದವು.

ವಸ್ತುಪ್ರದರ್ಶನ

ಮೈಸೂರು ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ಹಂಗಾಮಿ ಗೌರ್ನರ್ ಶ್ರೀ ಸೋಮನಾಥ ಅಯ್ಯರ್‌ರವರು ತಾ|| 12 ರಂದು ನೆರವೇರಿಸುವರು ಕೃ: ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಅಧ್ಯಕ್ಷತೆ ವಹಿಸುವರು.

★

ಸಾಲಾ ಹೆಚ್ಚಿದೆ

ಬೊಂಬಾಯಿ— ಭಾರತದ ಸಾಲವು ಮಾರ್ಚ್ 1968 ರಲ್ಲಿ ಕೂ 5651 ಕೋಟಿ ಇದ್ದಿತು – ಹಿಂದಿನ ವರ್ಷಕ್ಕಿಂತ ಇದು ರೂ 946 ಕೋಟಿ ಹೆಚ್ಚು.

——

ಆಮೇಲೆ ಹಣಕಾಸಿನ ಮಂತ್ರಿ ಯಾರು

ಸಿರಸಿ— ತಾವು ಮುಂದೆ ಚುನಾವಣೆಯಲ್ಲಿ ನಿಲ್ಲುವುದೆಂದೂ ಆದರೆ ತಮ್ಮ ಕೈಲಾದಷ್ಟು ಜನತಾ ಸೇವೆ ಮಾಡುವುದಾಗಿಯೂ ಹಣಕಾಸಿನ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ತಿಳಿಸಿದರು.

★

ಆಕ್ರಮಿತ ಭೂಮಿ

ಬೆಂಗಳೂರು— ಭೂಮಿಯಿಲ್ಲದ ರೈತರನ್ನು ಅವರು ಆಕ್ರಮಿಸಿರುವ ಸರ್ಕಾರಿ ಭೂಮಿಯಿಂದ ಹೊರದೂಡಿದರೆ ರೈತರ ಭಾರಿ ಮೋರ್ಚಾ ಮತ್ತು ಸತ್ಯಾಗ್ರಹ ನಡೆಯುವುದೆಂದು ವಿರೋಧ ಪಕ್ಷ ನಾಯಕ ಶ್ರೀ ಶಿವಪ್ಪನವರು ಹೇಳಿದರು.

——

ಶಾಸನಸಭೆಯಲ್ಲಿ ದಾಂಧಲೆ

ಭುವನೇಶ್ವರ— ಒರಿಸ್ಸಾ ಶಾಸನಸಭೆ ಪ್ರಾರಂಭವಾದೊಡನೆ, ವಿರೋಧ ಪಕ್ಷದವರು ಸ್ಪೀಕರರ ವಿರುದ್ಧ ಕೂಗುತ್ತ, ಟೇಬಲನ್ನು ಜೋಡಿಸಿನಿಂದ, ಪೇಪರ್‌ವೇಟಿನಿಂದ ಮೈಕ್ರೋಫೋನಿನಿಂದ ಬಡಿಯುತ್ತಾ ದಾಂಧಲೆ ಮಾಡಲು, ಸಭೆ ಪ್ರಾರಂಭವಾದ 10 ನಿಮಿಷಗಳಲ್ಲೇ ಸ್ಪೀಕರರು ಅಡ್ಜರ್ನ್ ಮಾಡಿದರು.

○

ನಾಗಾರ್ಜು ಅಣೆಕಟ್ಟು

ಅತ್ಯದ್ಭುತವಾದ ನಾಗಾರ್ಜುನಸಾಗರ ಅಣೆಕಟ್ಟಿಗೆ ಅಧ್ಯಕ್ಷ ಶ್ರೀ ಗಿರಿಯವರು ಭೇಟಿಕೊಟ್ಟರು.

★

ವನ್ಯ ಜೀವಿಗಳ ಮೆರವಣಿಗೆ

ಮೈಸೂರು— ವನ್ಯಜೀವಿ ಸಪ್ತಾಹ ಸಮಾರಂಭ ಸಮಾಪ್ತಗೊಂಡ ಭಾನುವಾರದಂದು ಜೂಗಾರ್ಡನ್ನಿನಿಂದ ಪ್ರಾಣಿಗಳ ಪ್ರದರ್ಶನ ನಡೆಸಲಾಯಿತು.

★

ಹೈದರಾಬಾದು— ಕೇಂದ್ರ ಆರೋಗ್ಯ ಮಂತ್ರಿ ಶ್ರೀ ಚಂದ್ರಶೇಖರ್ ಮತ್ತು ಆಂಧ್ರ ಮುಖ್ಯ ಮಂತ್ರಿ ಬ್ರಹ್ಮಾನಂದ ರೆಡ್ಡಿಯವರು ಸರೋಜಿನಿದೇವಿ ಆಸ್ಪತ್ರೆ ಕಣ್ಣು ನಿಧಿಗೆ ತಮ್ಮ ಕಣ್ಣನ್ನು ದಾನಾನಮಾಡಿದಾರೆ

ಹೈದರಾಬಾದು— ಶುಕ್ರವಾರದಿಂದ 9 ಪಾಯಿಂಟ್ ಕಾರ್ಯಕ್ರಮದ ಸಾಮೂಹಿಕ ಸತ್ಯಾಗ್ರಹ ಹೊಡಲಾಗುವುದೆಂದು ಪ್ರಜಾ ಸಮಿತಿ ಪ್ರಕಟಿಸಿದೆ.

ಖಟ್ಮಂಡು— ಭೂತಾನಿಗೆ ಬರುವ ಭಾರತ ಪದಾರ್ಥಗಳ ಮೇಲೆ ತೆರಿಗೆ ವಿಧಿಸಲು ಭೂತಾನು ಸರ್ಕಾರ ನಿರ್ಧರಿಸಿದೆ.

ರಾಮಾಯಣ ಮಹೋತ್ಸವ

ಇಂಡೋನೇಷಿಯವು ಯೂನೆಸ್ಕೊ ಸಹಾಯದೊಡನೆ 1970 ರಲ್ಲಿ ರಾಮಾಯಣ ಮಹೋತ್ಸವವನ್ನು ನೆರವೇರಿಸಲು ಸಿದ್ದಗೊಳಿಸುತ್ತಿದೆ. ಈಗ ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಇಂಡೋನೇಷಿಯಾದ ನೃತ್ಯ ಸಂಗೀತ ನಾಯಕ ಪ್ರೊ ॥ ಐ ಬಿ ಮಂತ್ರರವರು, ರಾಮಾಯಣದಲ್ಲಿ ಗೌರವವಿರುವ ದೇಶಗಳ ಜನರನ್ನು ಆಹ್ವಾನಿಸಲಾಗುವುದೆಂದು ಹೇಳಿದರು. ಅವರು ಭಾರತ ವಿದ್ಯಾ ಸಚಿವಾಲಯದ ಸ್ಟೇಟ್ ಮಂತ್ರಿ ಶ್ರೀ ಭಕ್ತದರ್ಶನರನ್ನು ಕಂಡು, ರಾಮಾಯಣ ಮಹೋತ್ಸವದಲ್ಲಿ ಭಾರತವು ಭಾಗವಹಿಸಬೇಕೆಂದು ವಿನಂತಿಸಿದರು.

ಈ ದಿನ ಮಾಡಬಹುದಾದ ಕಾರ್ಯವನ್ನು ನಾಳೆಗೆ ಏಕೆ ಇಡಬೇಕು?

ಒಂದು ಸಮಯೋಚಿತ ಕಾರ್ಯ

ನಾಳೆಗೆಂದು ಇಟ್ಟ ಕಾರ್ಯವನ್ನು ನೀವು ಮರೆತುಬಿಡಲು ಸಾಧ್ಯವಿದೆ. ಮತ್ತು ಮುಂಜಾಗ್ರತೆಯಿಂದಾಗಿ ಕೆಲವೊಮ್ಮೆಲಿಹಿಲ ನೆಪ್ಪಕ್ಕೆ ಕಾರಣವಾಗುತ್ತದೆ ಇದರಿಂದಾಗಿ ಕ್ಲೈಮ್‌ಗಳನ್ನು ಸಲ್ಲಿಸಲೂ ಆಗತ್ಯವಿಲ್ಲದ ವಿಳಂಬ. ನಯಾಪೈಸ ದಾಖಲೆ... ನಿಳಾಸದ ಬದಲಾವಣೆ... ಇತ್ಯಾದಿಕಾರ್ಯಗಳ ಹೆಸರು... ಮುಂತಾದ ವಿವರಗಳು ಇಲ್ಲದಿರುವುದರಿಂದಾಗಿ ಪ್ರತಿ ವರ್ಷ ಅನೇಕ ಕ್ಲೈಮ್‌ಗಳನ್ನು ತ್ಯಜಿಯಾಗಿ ಪಲ್ಲಿಸಲು ಆವಶ್ಯವಾಗುತ್ತದೆ. ಆದುವರಿಂದ ಆಗಾಗ್ಯೆ ನಿಮ್ಮ ಪಾಲಿಸಿಯ ತಪಾಸಣೆಯನ್ನು ಮಾಡಿರಿ. ಇಂದೇ ಮಾಡಿರಿ. ಮತ್ತು ನಿಮ್ಮ ಪ್ರೀಮಿಯಮನ್ನು ಪ್ರತಿ ತಿಂಗಳು ಸಂಬಂಧಪಟ್ಟ ಆಫೀಸಿನಲ್ಲಿ ತಕ್ಕ ಸಮಯದಲ್ಲಿ ಕೊಡಲು ಮರೆಯಬೇಡಿ.



ಜೀವ ವಿಮೆಗಿಂತ ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ಫಲಪುಷ್ಪ ಪ್ರದರ್ಶನ

ಮೈಸೂರು— ಗಾಂಧಿ ಶತಮಾನೋತ್ಸವ ಸಂಬಂಧವಾಗಿ ಏರ್ಪಡಿಸಲಾಗಿದ್ದ ಫಲಪುಷ್ಪ ಪ್ರದರ್ಶನದ ಬಹುಮಾನ ವಿನಿಯೋಗವು ನಿನ್ನೆ ಹಂಗಾಮಿ ಗೌರ್ನರ್ ಶ್ರಿ ಎ ಆರ್ ಸೋಮನಾಥ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಕಾರ್‌ಗಳ ಮೆಲಿನ ಹತೋಟಿ

ನವದೆಹಲಿ— ಕಾರುಗಳ ಬೆಲೆ ಮತ್ತು ಹಂಚಿಕೆ ಮೇಲೆ ಹತೋಟಿ ಮುಂದುವರಿಯಲು ಟ್ರೈರಿಫ್ ಕಮಿಷನ್ನಿನ ಬಹುಸಂಖ್ಯಾತರರ ನಿರ್ಧಾರವಾಗಿದೆ.

ವುಡ್‌ಲ್ಯಾಂಡ್ಸ್ ಜಯಪ್ರದ 4ನೇ ವಾರ

— ಆತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್ ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೇರಾ— ಈ ದಿವಸ

.... ಚಿತ್ತಾಕರ್ಷಕ ಹಿಂದಿ ಚಿತ್ರ ....

ಮಾಧವಿ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata V S Krishna Rao (Proprietor) at the Satyavadi Press Chamarajapura, Mysore.